**(ಇಂದು ದಿನಾಂಕಃ 14-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಬೋಧಿಸಲಾಯಿತು)**

**ಮುಂದುವರೆದ ಪಾಟೀ ಸವಾಲು : ವಾದಿ ಪರ ವಕೀಲರಿಂದಃ**

ಈ ಮೊದಲು ದಾವಾ ಆಸ್ತಿಗೆ ಸಂಬಂಧಿಸಿದಂತೆ ವಾದಿಯ ಮಗ ಯಲ್ಲಪ್ಪಾ ದಾಖಲಿಸಿದ್ದರು ಎಂದರೆ ಸರಿ. ಈ ಮೊದಲು ದಾವಾ ಆಸ್ತಿಗೆ ಸಂಬಂಧಿಸಿದಂತೆ ಯಲ್ಲಪ್ಪಾ ರವರು ದಾವೆಯನ್ನು ಸಲ್ಲಿಸಿ 5 ವರ್ಷಗಳ ಕಾಲ ಕೇಸನ್ನು ನಡೆಸಿದ್ದಾರೆ ಎಂದರೆ ಸರಿ. ಸದರಿ ಯಲ್ಲಪ್ಪಾ ಈತನು ದಾವಾ ಆಸ್ತಿಗೆ ಸಂಬಂಧಿಸಿದಂತೆ ಈ ಪ್ರಸ್ತುತ ದಾವೆಯಲ್ಲಿ ನಿರ್ಬಂಧಕಾಜ್ಞೆ ಆದೇಶವನ್ನು ಪಡೆದುಕೊಂಡಿದ್ದರು ಎಂದರೆ ಸರಿ. ಈ ದಾವೆಯಲ್ಲಿ ನಾನು ಹಾಜರಾಗಿ ನಿರ್ಬಂಧಕಾಜ್ಞೆ ಆದೇಶವನ್ನು ವಜಾ ಮಾಡಲು ಅರ್ಜಿಯನ್ನು ಸಲ್ಲಿಸಿರುವುದಿಲ್ಲಾ. ನಿರ್ಬಂಧಕಾಜ್ಞೆ ಆದೇಶವು ಈ ದಿನದವರೆಗೂ ಜಾರಿಯಲ್ಲಿದೆ ಎಂದರೆ ಸಾಕ್ಷಿಯು 2011 ರಲ್ಲಿ ನಿರ್ಬಂಧಕಾಜ್ಞೆ ಆದೇಶ ಇರಲಿಲ್ಲಾ ಎನ್ನುತ್ತಾರೆ.

ಯಲ್ಲಪ್ಪಾ ಇತನು ಈ ದಾವೆಯನ್ನು ಹಿಂಪಡೆಯಲು ಮೆಮೋ ಸಲ್ಲಿಸಿದಕ್ಕೆ ನಾನು ತಕರಾರುಪಡಿಸಿಲ್ಲಾ. ವಾದಿಯು ನನ್ನ ಅಜ್ಜನ ಎರಡನೇ ಅಣ್ಣನ ಮೊಮ್ಮಗ. ವಾದಿಯು ಈ ದಾವೆಯಲ್ಲಿ ಮೊದಲು 3 ನೇ ಪ್ರತಿವಾದಿಯಾಗಿದ್ದರು ಎಂದರೆ ಸರಿ. ನನ್ನ ಹಾಗೂ 3 ನೇ ಪ್ರತಿವಾದಿಯ ನಡುವಿನ ಸಂಬಂಧ ಚನ್ನಾಗಿತ್ತು. 3 ನೇ ಪ್ರತಿವಾದಿ ಈ ದಾವೆಯಲ್ಲಿ ತನ್ನನ್ನು ಪ್ರತಿವಾದಿಯಿಂದ ತೆಗೆದು ಹಾಕಿ ವಾದಿ ಆಗಲೇಂದು ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸರಿ ಸದರಿ ಅರ್ಜಿಗೆ ನಾನು ತಕರಾರು ಸಲ್ಲಿಸಿರುವುದಿಲ್ಲಾ. 3 ನೇ ಪ್ರತಿವಾದಿಯು ಈ ದಾವೆಯಲ್ಲಿ ಮೊದಲು ವಾದಪತ್ರವನ್ನು ಸಲ್ಲಿಸಿದ್ದಾಗ ಸದರಿ ವಾದ ಪತ್ರದ ಸಂಗತಿಗಳನ್ನು ನಾನು ಓದಿದ್ದೇನೆ.

ನಾನು ನನ್ನ ಶಪಥ ಪ್ರಮಾಣ ಪತ್ರದ ಮುಖಾಂತರ ಎಲ್ಲಾ ಪ್ರತಿವಾದಿಯರ ಪರವಾಗಿ ಸಾಕ್ಷ್ಯವನ್ನು ನುಡಿಯುತಿದ್ದೆನೆ. ಉಳಿದ ಪ್ರತಿವಾದಿರವರು ಅವರ ಪರವಾಗಿ ನನಗೆ ಈ ದಾವೆಯಲ್ಲಿ ಸಾಕ್ಷ್ಯ ನುಡಿಯಲು ಮುಕ್ತಿಯಾರ ಪತ್ರ ಕೊಟ್ಟಿರುವುದಿಲ್ಲಾ ಎಂದರೆ ಸರಿ. ದಾವಾ ಆಸ್ತಿಯನ್ನು ಮಾರಾಟ ಮಾಡುವ ಕಾಲಕ್ಕೆ ಈ ದಾವೆ ಚಾಲ್ತಿಯಲ್ಲಿರಲಿಲ್ಲ. ದಿಃ 15.11.2011 ರಂದು ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದೇನೆ. ದಿಃ 15.11.2011 ರಂದು ಈ ನ್ಯಾಯಾಲಯದಲ್ಲಿ ಈ ದಾವೆ ಚಾಲ್ತಿಯಲ್ಲಿತ್ತೋ ಅಥವಾ ಮುಗಿದಿತ್ತೋ ಎಂದರೆ ಸಾಕ್ಷಿಯು ಆ ದಿನದಂದು ಈ ದಾವೆಯು ಇರಲಿಲ್ಲಾ ಎನ್ನುತ್ತಾರೆ. ತದನಂತರ ಹೊಸ ದಾವೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ಯಾವಾಗ ದಾಖಲಾಯಿತು ಎಂದರೆ ಸಾಕ್ಷಿಯು 2012 ನೇ ಸಾಲಿನ ನಂತರದಿಂದ ದಾಖಲಾಗಿರಬಹುದು ಎನ್ನುತ್ತಾರೆ. 2012 ನೇ ಸಾಲಿನ ನಂತರದಲಿ ದಾಖಲೆಗೊಂಡ ಹೊಸ ದಾವೆಯ ಸಂಖ್ಯೆ ನನಗೆ ಗೊತ್ತಿರುವುದಿಲ್ಲಾ. 2011 ರಲ್ಲಿ ಈ ದಾವೆಯು ಮುಗಿದಿತ್ತು ಹಾಗೂ 2012 ರಲ್ಲಿ ಹೊಸ ದಾವೆ ದಾಖಲಾದ ಬಗ್ಗೆ ಈ ನ್ಯಾಯಾಲಯದಲ್ಲಿ ದಾಖಲೆಯನ್ನು ಸಲ್ಲಿಸಿರುವುದಿಲ್ಲಾ. ದಾವಾ ಆಸ್ತಿಯನ್ನು ಮಾರಾಟ ಮಾಡುವ ಕಾಲಕ್ಕೆ ನ್ಯಾಯಾಲಯದಿಂದ ಅನುಮತಿಯನ್ನು ಪಡೆದಿಲ್ಲಾ ಏಕೆಂದರೆ ಆ ಕಾಲಕ್ಕೆ ಈ ದಾವೆ ಚಾಲ್ತಿಯಲ್ಲಿರಲಿಲ್ಲ.

ಈ ದಾವೆಯು 2008 ರಿಂದ ಈ ದಿನದವರೆಗೆ ಚಾಲ್ತಿಯಲ್ಲಿದೆ ಎಂದರೆ ಸರಿ. ದಾವಾ ಆಸ್ತಿಯ ಚಕಬಂದಿ ಸಲ್ಲಿಸಿರುವುದಿಲ್ಲಾ ಎಂದು ನಾನು ತಕರಾರು ಸಲ್ಲಿಸಿರುವುದಿಲ್ಲಾ ಎಂದರೆ ನನಗೆ ನೆನಪಿಲ್ಲಾ ಎನ್ನುತ್ತಾರೆ. ನನ್ನ ಪ್ರತಿವಾದ ಪತ್ರದಲ್ಲಿ ಬರೆಯಿಸಿದ ಅಂಶಗಳ ಬಗ್ಗೆ ನನಗೆ ನೆನಪು ಇದೆ. ಖರೀದಿ ಪತ್ರದಲ್ಲಿ ಬರೆಯಿಸಿದ ಚಕಬಂದಿ ನನಗೆ ನೆನಪಿದೆ. 1965 ರಿಂದ ಇಲ್ಲಿಯವರೆಗೆ ಆದ ವಿಷಯಗಳ ಬಗ್ಗೆ ನನಗೆ ನೆನಪಿದೆ. 2012 ರಲ್ಲಿ ಚಕಬಂದಿ ತಪ್ಪಾಗಿ

ನಮೂದ ಆದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲಾ ಉಳಿದ ಸಂಗತಿಗಳ ಬಗ್ಗೆ ಮಾಹಿತಿ ಇದೆ. ನನ್ನ ಜನ್ಮ ದಿನಾಂಕ 01.06.1965. ನಾನು ಜನಿಸಿದ ಊರು ನೇಸರಗಿ. ನನಗೆ 18 ವರ್ಷಗಳ ತುಂಬಿದ ನಂತರ ತಿಳುವಳಿಕೆ ಬಂದಿದೆ.

ಖರೀದಿ ಪತ್ರದಲ್ಲಿ ಚಕಬಂದಿಯನ್ನು ಪಟ್ಟಾ ಕಾಗದವನ್ನು ನೋಡಿ ಬರೆಯಿಸಿದೇನೆ. ಸದರಿ ಪಟ್ಟಾ ಕಾಗದವು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲಾ. ಸರ್ವೆ ನಂ. 282/3 ವಿಸ್ತೀರ್ಣ 4 ಎಕರೆ 08 ಗುಂಟೆ ಜಮೀನು ನಮ್ಮ ಪಿರ್ತಾರ್ಜಿತ ಆಸ್ತಿ ಎಂದರೆ ಸರಿ. VPC ಸಂಃ 253 ರ ಮನೆಯು ಈಗ ಬಿದ್ದಿರುತ್ತದೆ. ಸದರಿ VPC ಸಂಃ 253 ರ ಮನೆಯು ನಮ್ಮ ಪಿರ್ತಾರ್ಜಿತ ಆಸ್ತಿ ಎಂದರೆ ಸರಿ. ದಾವಾ ಆಸ್ತಿ ಸರ್ವೆ ನಂ. 282/3, VPC ಸಂಃ 253 ರ ಮನೆಗೆ ಸಂಬಂಧಿಸಿದಂತೆ ನೋಂದಣಿ ಕಚೇರಿಯಲ್ಲಾಗಲೀ, ನ್ಯಾಯಾಲಯದಿಂದ ಡಿಕ್ರಿ ಮುಖಾಂತರವಾಗಲೀ ವಾದಿ ಹಾಗೂ ಪ್ರತಿವಾದಿ ರವರ ಮದ್ಯ ವಾಟ್ನಿ ಆಗಿರುವುದಿಲ್ಲಾ ಎಂದರೆ ಸರಿ.

ವಾದಿ ಪರ ವಕೀಲರು ಮುಂದಿನ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಪಾಟೀ ಸವಾಲು ಮುಂದೂಡಲಾಯಿತು.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೆ ಕೆ ಸರಿ ಇದೆ**

**Sd/-**

**(Abhinay)**

**Addl. CJ & JMFC, Gokak**